**ಸಾವಿ ಇನ್ನೊಂಚೂರು ....**

ಸಾವಕ್ಕ ಜೋರಾಗಿ ಚೀರಿದಳು

ಸಾವಿ ಉಸುರು ಬಿಗಿ ಹಿಡಿ ಇನ್ನೊಂಚೂರು ....

ಇನ್ನೊಂಚೂರು ...

ಸಾವಕ್ಕ ಬಾಯಿ ಬಿಗಿ ಹಿಡಿದುಕೊಂಡೇ ನೋವಿನಿಂದ ಜೋರಾಗಿ ಚೀರಿದಳು.

ಸಾವಕ್ಕ ಇನ್ನೊಂಚೂರು .. ಸಾವಿ ಇನ್ನೊಂಚೂರು

ಹಾಂ ತಲೆ ಕಾಣಸಾಕತ್ತೈತಿ

ಸಾವಿ ಈ ಬ್ಯಾನಿ ಜೋರಾಗ್ತೈತಿ ಬಿಡಬ್ಯಾಡಾ ಬಿಡಬ್ಯಾಡಾ .....

ಹಾಂ.. ಸಾವಕ್ಕ ಇನ್ನೂ ಜೋರಾಗಿ ಚೀರಿದಳು.

ಒಮ್ಮೆಲೆ ಮೈಯಲ್ಲಿನ ಎಲ್ಲವೂ ಹರಿದು ಹೋದ ಅನುಭವ!

ಕಾಲು ಕೈ ಯಾವುದೋ ಎಳೆದುಕೊಳ್ಳಲು ಕೂಡ ಶಕ್ತಿ ಇಲ್ಲ, ಕಾಲು ಕೈ ಬಿಡಿ ಕುತ್ತಿಗೆ ಕೂಡ ಅಲ್ಲಾಡಿಸಲು ಆಗುತ್ತಿಲ್ಲ. ಸಾವಿ ಮೆಲ್ಲಗೆ ಕಣ್ಣು ಮುಚ್ಚಿಕೊಂಡಳು, ಸೂಲಗಿತ್ತಿ ಮಗುವನ್ನು ತೊಳೆದು ಹಳೇ ಮೆತ್ತಗಿನ ಹತ್ತಿಯ ಸೀರೆಯಲ್ಲಿ ಬೆಚ್ಚಗೆ ಸುತ್ತಿದಳು.

ಮಗು ಚೀರಿ ಚೀರಿ ಅಳತೊಡಗಿತು.

ಸಾವಿಗೆ ಪ್ರೀತಿಯಿಂದ ಎದೆ ತುಂಬಿ ಬಂತು.

ಹೊರಗೆ ನಿಂತಿದ್ದವರಿಗೆಲ್ಲ ಸೀರೆಯಲ್ಲಿ ಸುತ್ತಿದ್ದ ಮಗುವನ್ನು ತೋರಿಸಿಕೊಂಡು ಬಂದ ಸೂಲಗಿತ್ತಿ ಮೆಲ್ಲಗೆ ಸಾವಿಯ ಪಕ್ಕದಲ್ಲಿ ಮಲಗಿಸಿದಳು. ಸಾವಿ ಮೆಲ್ಲಗೆ ಕಣ್ಣು ತೆರೆದಳು. ಮಗುವಿನ ಮುಖವನ್ನು ನೋಡಿದೊಡನೆಯೇ ಎಲ್ಲಿಲ್ಲದ ಶಕ್ತಿ ಉಕ್ಕಿ ಬಂತು. ಮೈ ತುಂಬ ದೈವ ಸಂಚಾರವಾದ ಅನುಭವ! ಅದಕ್ಕೆಂದೇ 'ತಾಯಿ ದೇವರು' ಎಂದು ಅನ್ನುತ್ತಾರೇನೋ ಎನಿಸಿತು. ಮೆಲ್ಲಗೆ ಮಗುವಿನ ಮೇಲೆ ಕೈ ಇಟ್ಟಳು. ತಾಯಿಯ ಸ್ಪರ್ಶ ಮಗುವಿಗೆ ಗೊತ್ತಾಯ್ತು. ನಿದ್ದೆಯಲ್ಲೇ ನಸುನಕ್ಕಿತು. ದೇವ ನಗೆ! ತಾನೂ ಸುಖದಿಂದ ರೆಪ್ಪೆ ಮುಚ್ಚಿದಳು ಸಾವಿ.

ಸೂಲಗಿತ್ತಿ ಬಾಣಂತಿ ಹೊಲಸನ್ನೆಲ್ಲ ಸ್ವಚ್ಛ ಮಾಡುತ್ತಿದ್ದಳು, ಸಾವಿಗೆ ಮತ್ತೆ ಸಣ್ಣಗೆ ಬೇನೆ ಶುರುವಾಯ್ತು. ಒಮ್ಮೆಲೇ ಸಾವಿ ಜೋರಾಗಿ ಚೀರಿದಳು.

ಸೂಲಗಿತ್ತೆವ್ವ ಸಾವಿಗೆ ಮತ್ತ ಬ್ಯಾನಿ ಬರಾಕತ್ತಾವ ಇನ್ನೊಂದು ಕೂಸು ಐತೇನು. ಮನೆ ಅಜ್ಜಿ ನುಡಿದಳು.

ಸೂಲಗಿತ್ತಿ ಮತ್ತೆ ಸಾವಿಯ ಸ್ಥಿತಿಯನ್ನು ಅವಲೋಕಿಸ ತೊಡಗಿದಳು.

ಬುಳುಕ್ಕನೇ ಹೊರ ಬಿತ್ತು ಅಂಗೈ ಉದ್ದದ ಹಾವಿನ ಮರಿ !

ಸೂಲಗಿತ್ತಿ ಬೆದರಿ ಹಿಂದೆ ಸರಿದಳು. 'ಇದೇನು ಸಾವಿ ಹೊಟ್ಯಾಗ ಜಂತಗಿಂತ ಆಗ್ಯಾವೇನು. ಹಾವಿನ ಮರಿಯಷ್ಟು ಉದ್ದೈತಿ ನೋಡು' ಎನ್ನುತ್ತ ಮರಿಯನ್ನು ಬಾಣಂತಿ ಹೊಲಸು ತುಂಬಿದ್ದ ಗಂಗಾಳಕ್ಕೆ ಹಾಕಿದಳು. ಕೈ ತೊಳೆಯಲೆಂದು ಹಿತ್ತಲಕ್ಕೆ ಹೋದಳು.

ಸಾವಕ್ಕ ಬೆದರಿದಳು.

ಗಂಗಾಳದತ್ತ ಕಣ್ಣು ಹಾಯಿಸಿದಳು. ಮರಿ ಬುಡಬುಡನೇ ಹೊರಳಾಡುತ್ತಿದೆ. ಹೊರಬರಲು ಹವಣಿಸುತ್ತಿದೆ. ಅದರ ಮುಖವನ್ನೇ ನೋಡಿದಳು, ಬಾಯಿಯ ಬಲಕ್ಕೆ ಕಪ್ಪು ಮಚ್ಚೆ! ಎತ್ತಿಕೋ ಎಂದಂತಾಯಿತು. ಒಡಕ್ಕನೇ ಆ ಮರಿಯನ್ನು ಕೈಯಿಂದೆತ್ತಿ ತನ್ನ ತಲೆ ಕೆಳಗಿದ್ದ ಬಟ್ಟೆಯ ಬುಡದಲ್ಲಿ ಮುಚ್ಚಿಟ್ಟಳು. ಕಣ್ಣು ಮುಚ್ಚಿದಳು. ಶಾಂತ ನಿದ್ದೆ ಸುರಿದು ಬಂದಂತೆ ಭಾಸವಾಗತೊಡಗಿತು. ತಲೆಯ ಬುಡದಲ್ಲಿ ಸುಳಿ ಸುಳಿ ಸುಳಿ ದಾಟ !

ಎಚ್ಚರವಾದಾಗ ಅರ್ಧ ದಿನ ಕಳೆದುಹೋಗಿತ್ತು. ಪಕ್ಕದಲ್ಲಿ ಕೈಯಾಡಿಸಿದಳು. ಮಗು ಮಲಗಿತ್ತು. ತಲೆಯ ಕೆಳಗೆ ಕೈಯಾಡಿಸಿದಳು.

ಮರಿ ಕೈಗೆ ಹತ್ತಲಿಲ್ಲ. ಏಳಲು ಹೊರಟಳು. ಏಳಲು ಆಗಲಿಲ್ಲ.

'ತಂಗೀ, ಎರಡೂ ನಿನ್ನ ಕೂಸ ಅದು ಹಾವಿನ ಮರಿ, ಹಾವಾದ್ರ ಏನಾತ, ನಿನ್ನ ಕೂಸಂತೂ ಖರೆ, ಅದನ್ನ ಸ್ವಚ್ಛ ತೊಳೆದು ಬೆಚ್ಚಗೆ ಸುತ್ತಿ ಆ ಕಡೆ ಮಗಲಿಸೀನಿ ನೋಡ್ಕ, ಎರಡೂ ನಿನ್ನ ಮಕ್ಳ ಪ್ರೀತೀಲೆ ಸಾಕು. ಪ್ರಾಣಿ ಬ್ಯಾರೆ ಬ್ಯಾರೆ ಆದ್ರನೂ ತಾಯಿ ಎಲ್ಲಾ ಕಡೆ ಒಂದ ಇರ್ತಾಳ ನೆನಪಿಟ್ಕೊ ಆತ...'

ಹೆರಿಗೆ ಮಾಡಿಸಲೆಂದು ಬಂದಿದ್ದ ಪಕ್ಕದ ಮನೆ ಹಿರಿಯಜ್ಜಿ ಸಾವಕ್ಕನಿಗೆ ತಿಳಿ ಹೇಳಿದಳು, ಮಲಗಿದ್ದಲ್ಲೇ ಬಿಸಿ ಹಾಲು ಕುಡಿಸಿ ಮನೆಗೆ ಹೋದಳು.

ಸಾವಕ್ಕನ ಮನೆಯಂಗಳದಲ್ಲಿ ದೊಡ್ಡ ಚರ್ಚೆಯೇ ನಡೆದಿತ್ತು. ಸಾವಕ್ಕನ ಅವಳಿ ಮಕ್ಕಳು ದೊಡ್ಡ ಪ್ರಶ್ನೆಯಾಗಿದ್ದರು. ಸಾವಕ್ಕನ ಗಂಡ ರುದ್ರಪ್ಪ ಕೆಂಡಾಮಂಡಲವಾಗಿದ್ದ. ಅತ್ತೆ ಸೀಮಂತವ್ವ, ಮಾವ ಹನುಮಂತಪ್ಪ, ಅತ್ತೆಯ ಅವ್ವ ಜಿಂಕವ್ವ ಎಲ್ಲರೂ ಭಾರಿ ಚರ್ಚೆಗಿಳಿದಿದ್ದರು.

ನೋಡ ನೋಡುತ್ತಿದ್ದಂತೆ ಸಾವಕ್ಕ ಹಾವು ಹೆತ್ತ ಸುದ್ದಿ ಹಳ್ಳಿಯ ತುಂಬ ಹಬ್ಬಿ ಬಿಟ್ಟಿತು. ಜನ ತಂಡೋಪತಂಡವಾಗಿ ನೋಡಲು ಬರತೊಡಗಿದರು. ಅವರ ಗದ್ದಲ ಸಪ್ಪಳ ಕೇಳಿದಾಗಲೆಲ್ಲ ಸಾವಕ್ಕನ ಎರಡೂ ಮಕ್ಕಳು ತಾಯಿಯನ್ನು ಅಪ್ಪಿಕೊಂಡು ಮಲಗತೊಡಗಿದ್ದು. ಸಾವಕ್ಕನ ಮನದಲ್ಲಿ ಅದೇನೋ ಬೆಚ್ಚಗಿನ ಭಾವ !

ಮನೆಗೆ ಜನರೆಲ್ಲ ಬರುವುದು, ಹಾವಿನ ಮರಿಯನ್ನು ಕೌತುಕದಿಂದ ನೋಡುವುದು, ರುದ್ರಪ್ಪನಿಗೆ ಸಿಟ್ಟು ತರಿಸತೊಡಗಿತು. ಬಂದವರಿಗೆಲ್ಲ ರುದ್ರಪ್ಪನ ಮಗನಿಗಿಂತ ಹಾವಿನ ಮರಿಯೇ ಕೌತುಕದ ವಿಷಯವಾಗಿತ್ತು.

ಅಂದು ಬಂದ ಜನರೆಲ್ಲ ಕರಗಿದಾಗ ರಾತ್ರಿ 12 ಆಗಿತ್ತು. ರುದ್ರಪ್ಪ ಮೊದಲ ಬಾರಿಗೆ ಒಳಬಂದು ತನ್ನ ಮಗನನ್ನು ನೋಡಿದ. ಕೊರಳಲ್ಲಿದ್ದ ಚೈನು ತೆಗೆದು ಮಗನ ಕೊರಳಿಗೆ ಹಾಕಿದ. ಗಂಡನ ಒರಟುತನ ಸಹಿಸಿಕೊಳ್ಳುತ್ತಲೇ ಸಂಸಾರ ಮಾಡಿದ್ದ ಸಾವಕ್ಕನಿಗೆ ಆತ ಹಾವಿನ ಮರಿಯನ್ನು ನೋಡುತ್ತಾನೆ ಎಂಬ ಆಸೆಯಂತೂ ಇರಲಿಲ್ಲ. ಅದಕ್ಕೇನೂ ಮಾಡದಿದ್ದರೆ ಸಾಕು ದೇವರೇ ಎಂದು ಬೇಡಿಕೊಂಡಳು. ರುದ್ರಪ್ಪ ಸಾವಕ್ಕನ ಪಕ್ಕದಲ್ಲಿ ಕೈಯಾಡಿಸಿ ಹಾವಿನಮರಿ ಎತ್ತಿಕೊಂಡೇ ಬಿಟ್ಟ. 'ದಯಮಾಡಿ ಅದಕ್ಕೇನೂ ಮಾಡಬ್ಯಾಡ್ರಿ, ಅದೂ ನಮ್ಮ ಕೂಸನ' ಎನ್ನುತ್ತ ಜೋರಾಗಿ ಚೀರಿದಳು ಸಾವಕ್ಕ. ಕೆಂಡಾಮಂಡಲವಾದ ರುದ್ರಪ್ಪ 'ಇದು ನಮ್ಮ ಕೂಸ.. ಹಾವು ಹಡದ ನನ್ನ ಕೂಸು ಅಂತೀಯ, ನನ್ನ ಮಗನ್ನ ಇದು ಕಡದ ಕೊಲತೈತಿ' ಎಂದವನೇ ಅದನ್ನು ಕಿಡಕಿ ತೆಗೆದು ಹೊರಗೆಸೆದುಬಿಟ್ಟ. ಸಾವಕ್ಕನ ಕಣ್ಣಲ್ಲಿ ಧಾರೆ ಧಾರೆ ನೀರು ಹರಿಯಿತು. ಮಗುವನ್ನು ಕಳೆದುಕೊಂಡ ತಾಯಿ ಕಣ್ಣೀರು ಅದಾಗಿತ್ತು.

ರಾತ್ರಿ ಅತ್ತೆ ಸೀಮಂತವ್ವ ಕುಡಿಯಲು ತಂದ ಹಾಲು, ಪಾಯಸ ಯಾವೂದೂ ಅವಳಿಗೆ ರುಚಿಸಲಿಲ್ಲ.

***

ಮರುದಿನ ಬೆಳಿಗ್ಗೆ ಬೆಳಿಗ್ಗೆನೇ ಸೀಮಂತವ್ವ ಸಾವಕ್ಕನನ್ನು ಎಬ್ಬಿಸಿದಳು.

'ಸಾವಿ, ಗಡಾನ ಏಳು ಬೆಳಕಾಗದ್ರಾಗ ನಿನ್ನ ಎರಕೊಳ್ಳೋದು ಮುಗೀಲಿ, ಬೆಳಕಾತಂದ್ರ ಮಂದಿ ಓಡ್ಯಾಡತಾರ, ಗಡಾನ ಎರಕೋ ನಡಿ, ಕುಳ್ಳ ಹಾಕಿ ಅಗ್ಗಿಷ್ಟಿಕಿ ಹಾಕಟ್ಟೀನಿ, ಊದ ಹಾಕಿ ಕೊಡತೇನಿ, ಛಂದಾಗಿ ಕಾಸ್ಕೊ, ನಡಿ ನಡಿ'.

ಸಾವಕ್ಕ ಅತ್ತೆ ಮಾತಿಗೆ ಎಂದೂ ಎದುರಾಡಿದವಳಲ್ಲ. ಹೀಗಾಗಿ ಬೇಕು ಬೇಡ ಎಂದು ಹೇಳುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಮತ್ತೆ ಮತ್ತೆ ಹಾವಿನ ಮರಿ ಮಾತ್ರ ನೆನಪಾಗುತ್ತಿತ್ತು. ಕಣ್ಣಲ್ಲಿ ನೀರು ಬರುತ್ತಿತ್ತು. ಸಾವಿ, ಹಾವಿಗಾಗಿ ಅಳುತ್ತಲೇ ಇದ್ದಳು. 'ಹುಚ್ಚಿ ಅದನ್ನ ಸಾಕಿ ಏನ ಮಾಡತಿ, ವಿಷಾ ಉಡ್ಯಾಗ ಕಟಗೊಂಡ ಬದಕಾಕ ಆಕ್ಕೈತೇನ. ರುದ್ರ ಅದನ್ನು ಹೊರಗ ಒಗದ ಚಲೋ ಮಾಡಿದ. ನಾನ ಆ ಕೆಲ್ಸಾ ಮಾಡಾಕಿದ್ದೆ'. ಸೀಮಂತವ್ವ ನಿರ್ಣಯ ಕೊಟ್ಟೇಬಿಟ್ಟಳು. ಸಾವಕ್ಕ ಅಳುತ್ತಲೇ ಎರೆದುಕೊಳ್ಳಲು ಹೋದಳು.

***

ಸಾವಕ್ಕನಿಗೆ ಅದ್ಯಾಕೋ ತುಂಬಾ ಸುಸ್ತೆನಿಸುತ್ತಿತ್ತು. ಬಾಣಂತಿ ಖೋಲಿಯಲ್ಲಿ ಎಲ್ಲ ಕಡೆಗೂ ಬಟ್ಟೆ ಕಟ್ಟಿ ಮರೆ ಮಾಡಿ ಹಾಸಿಗೆ ಪಕ್ಕದಲ್ಲೇ ಜೋಳಿಗೆ ಕಟ್ಟಿ ಸೀಮಂತವ್ವ ತಯಾರಿ ಮಾಡೇ ಬಿಟ್ಟಿದ್ದಳು. ಸಾವಕ್ಕ ಎರೆದುಕೊಂಡು ಬಂದು ಮಲಗಿದಳು. ಕಣ್ಣಲ್ಲಿ ತುಂಬಾ ನೀರು ಬರುತ್ತಲೇ ಇತ್ತು. ಸೀಮಂತವ್ವ ಊದು ಹಾಕಿ ಅಗ್ಗಿಷ್ಟಿಕೆಯನ್ನು ಹೊರಸಿನ ಕೆಳಗಿಟ್ಟು ತಂಗೀ, ಊರಾಗೆಲ್ಲ ಮೊಮ್ಮಗನ ಕೊಬ್ರಿ ಸಕ್ರಿ ಹಂಚಬೇಕು. ನಾನು ಹೋಗಿ ಬರಲ್ಯಾ, ಕಾಸಗೊಂಡ ಮ್ಯಾಗ ಹಾಲು ಕುಡಿ, ಇಲ್ಲೇ ಇಟ್ಟೇನಿ ನೋಡ ಎಂದು ಹೇಳುತ್ತಲೇ ಬಾಗಿಲು ಮುಂದೆ ಮಾಡಿಕೊಂಡು ಹೋದಳು.

ಕೋಣೆಯಲ್ಲಿ ಯಾರೂ ಇಲ್ಲ. ಸಾವಕ್ಕ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಧಾರೆ ಧಾರೆ ಹರಿದ ಎದೆಯ ಹಾಲು ದಿಂಬು ತೋಯಿಸಿತು ಕಿವಿಯ ಹತ್ತಿರ ಏನೋ ಸುಳಿದಾಡಿದ ಅನುಭವ !. ಅದೆಲ್ಲಿಂದ ಶಕ್ತಿ ಬಂತೊ ಸರ್ರನೇ ಎದ್ದು ಕುಳಿತು ಹಾಸಿಗೆ ಸರಿಸಿ ನೋಡುತ್ತಾಳೆ. ಅಲ್ಲೇ ಬಂದು ದಿಂಬಿನ ಕೆಳಗೆ ಮಲಗಿತ್ತು ಹಾವಿನ ಮರಿ.

ಮೈ ರೋಮಾಂಚನಗೊಂಡಿತು. ಕೈಯಿಂದ ಮೃದುವಾಗಿ ಎತ್ತಿದವಳೇ ಎದೆಗಪ್ಪಿಕೊಂಡಳು, ಮುದ್ದಾಡಿದಳು.

ಹೇಗಾದರೂ ಮಾಡಿ ಅದನ್ನು ಸಾಕುವ ನಿರ್ಧಾರಕ್ಕೆ ಬಂದಳು, ಮೆಲ್ಲಗೆ ಅದನ್ನು ಮುಖದ ಮುಂದೆ ಹಿಡಿದುಕೊಂಡು ಹೂ ಮುತ್ತನಿತ್ತಳು. ಚಿಕ್ಕ ಚಿಕ್ಕ